
ಕವಿತೆ



## ಕಾವ್ಯಾ ಕಡಮೆ

ಕಲೆ: ರೂಪಶ್ರೀ ಕಲ್ಲಿಗನೂರು



# ಸನಿಹ

ಮಧ್ಯರಾತ್ರಿ

ನಿಮ್ಮ ಸಮೀಪಿಸಲು ಇರೋ
ಒಂದೇ ಮಾರ್ಗ
ಮೂಡುತಿರೋ ಈ ಅಕ್ಷರಗಳು

ಬೆನ್ನಿಗೆ ಕೈಯಿಟ್ಟು
ದಾಟಿಸಿದ ರಸ್ತೆ

ಬಾಯಾರಿಕೆ
ಬಿಸಿಲು
ನೆರಳು ಅರಸಿ ಬಂದರೆ
ಪುಷ್ಪ ಹಾಸಿ ಕೊಟ್ಟ ವೃಕ್ಷ

ಉಂಡ ಅಗುಳು
ರಕ್ತವಾಗಿ ಹೃದಯ ಹೊಕ್ಕು
ಶುದ್ಧವಾದ ಹಾಗೆ

ಸಾಂಗತ್ಯ

ಎರಡು ದ್ವೀಪಗಳ ಸೇರಿಸೋ
ತೂಗು ಸೇತುವೆ.

# ಪತ್ರ

ಒಂದೂ ಶಬುದವೇಳದ
ಗಾಢ ನಿದಿರೆಯ ಸುಖ
ನಿಮ್ಮ ಇರುವು

ಪ್ರತಿ ಬಾಗಿಲು ದಾಟಿದಾಗಲೂ
ಬರಸೆಳೆದ ಭಾಸ

ಆಡಬಾರದ ಮಾತು
ಬರೆಯಬಾರದ ಪತ್ರ
ತಿರುಗಬಾರದ ನೋಟ

ಹೂ
ದಂಡೆಯಲ್ಲೇ
ಕಲ್ಲಾದ ಭಯ.